ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ,ಬೆಂಗಳೂರು-1

ಸಂಖ್ಯೆ:ಸಿ3(6)ಪ್ರಾ.ಶಿ.ಸಾ.ಭ.ನಿ-ಸುತ್ತೋಲೆ 01/2011-12 ದಿನಾಂಕ: 10-08-2011

# ಸುತ್ತೋಲೆ

ವಿಷಯ: ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳು ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ ಮತ್ತು ಭಾಗಶಃ ವಾಪಸಾತಿ ಬಗ್ಗೆ.

ಉಲ್ಲೇಖ: ಮಾನ್ಯ ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ಇವರ ಮೌಖಿಕವಾಗಿ ತಿಳಿಸಿದ ದಿನಾಂಕ: 22-07-2011.

$$$$$$

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಸಾಮಾನ್ಯ ಭವಿಷ್ಯ ನಿಧಿಯ ಮುಂಗಡ ಮತ್ತು ಭಾಗಶಃ ವಾಪಸಾತಿ ಕೋರಿ, ಪ್ರಸ್ತಾವನೆಯನ್ನು ಈ ಆಯುಕ್ತಾಲಯಕ್ಕೆ ಸಲ್ಲಿಸುವಾಗ ಈ ಕೆಳಕಾಣಿಸಿದ ಮಾರ್ಗಸೂಚಿಗಳನ್ನು ಪಾಲಿಸಲು ಸೂಚಿಸಿದೆ.

1. ಸದರಿ ಶಿಕ್ಷಕರಿಗೆ ಸಂಬಂಧಿಸಿದ ಭಾವಚಿತ್ರವಿರುವ ವೋಟರ್ ಐಡಿ, ಪಾನ್ ಕಾರ್ಡ್, ಡ್ರೈವಿಂಗ್ ಲೈಸನ್ಸ್, ಟಿ.ಬಿ.ಎಫ್ ನಿಂದ ನೀಡಿರುವ ಆಜೀವ ಸದಸ್ಯತ್ವದ ಕಾರ್ಡ್ ಇವುಗಳಲ್ಲಿ ಯಾವುದಾದರೂ ಒಂದು ಕಾರ್ಡಿನ ಜೆರಾಕ್ಸ್ ಪ್ರತಿಯನ್ನು ಕ್ಷೇತ್ರ ಶಿಕ್ಷಣಾಕಾರಿಗಳಿಂದ ದೃಢೀಕರಿಸಿ ನೀಡುವುದು.
   **(ಮೊದಲ ಅದ್ಯತೆ ಟಿ.ಬಿ.ಎಫ್ ನಿಂದ ಐ.ಡಿ ಕಾರ್ಡ್)**
2. ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ ಮತ್ತು ಭಾಗಶಃ ಮಂಜೂರಾತಿಗೆ ಸಂಬಂಧಿಸಿದಂತೆ ಮಾರ್ಚ್ ನಂತರದ ಕಟಾವಣೆಯನ್ನು ಯಾವ ಮಾಹೆಗೆ ಕೊನೆಗೊಳಿಸಿದೆಯೊ ಆ ಮಾಹೆಯ ವೇತನ ಪ್ರಮಾಣ ಪತ್ರ ಸಲ್ಲಿಸುವುದು.
3. ಸದರಿಯವರ ವೇತನ ಪ್ರಮಾಣ ಪತ್ರದಲ್ಲಿ ತಿಂಗಳು ಹಾಗೂ ಶಿಕ್ಷಕರ ಹೆಸರು, ಕಾರ್ಯನಿರ್ವಹಿಸುವ ಹುದ್ದೆ, ಸ್ಥಳ, ತಾಲ್ಲೂಕು, ಜಿಲ್ಲೆ ಈ ಎಲ್ಲಾ ಅಂಶಗಳನ್ನು ಸ್ಪಷ್ಟವಾಗಿ ನಮೂದಿಸುವುದು ಹಾಗೂ ಹೆಚ್.ಆರ್.ಎಂ.ಎಸ್. ನಿಂದ ಮುದ್ರಿತವಾಗುವ ವೇತನ ಪ್ರಮಾಣ ಪತ್ರದ ಒಂದು ಪ್ರತಿ ನೀಡುವುದು.
4. ಮುಂಗಡ ಮಂಜೂರಾತಿಗಾಗಿ ಕೋರಿರುವ ಪ್ರಸ್ತಾವನೆಗಳಲ್ಲಿ ನಮೂನೆ-4ರಲ್ಲಿನ ಕಾಲಂ ಸಂಖ್ಯೆ.10 ಈ ಹಿಂದೆ ಮುಂಗಡ ಮಂಜೂರಾತಿಯಾಗಿದ್ದರೆ. ಕೊನೆಯ ಕಟಾವಣೆ ತಿಂಗಳು ಮತ್ತು ವರ್ಷವನ್ನು ಸ್ಪಷ್ಟವಾಗಿ ನಮೂದಿಸಬೇಕು. ಹಾಗೂ ಅಂತ್ಯಗೊಂಡಿರುವ ಬಗ್ಗೆ. ನಮೂದಿಸುವುದು.
5. ಭಾಗಶಃ ಮಂಜೂರಾತಿಗಾಗಿ ಕೋರಿರುವ ಪ್ರಸ್ತಾವನೆಗಳಲ್ಲಿ ಈ ಹಿಂದೆ ಭಾಗಶಃ ಮಂಜೂರಾತಿ ಪಡೆದಿದ್ದರೆ ಮಂಜೂರಾತಿ ಸಂಖ್ಯೆ. ಮತ್ತು ದಿನಾಂಕವನ್ನು ನಮೂದಿಸುವುದು.
6. ಮುಂಗಡ ಮತ್ತು ಭಾಗಶಃ ಮಂಜೂರಾತಿಗೆ ಸಂಬಂಧಿಸಿದಂತೆ ನಮೂನೆ-3ರಲ್ಲಿ ಸದರಿ ಶಿಕ್ಷಕರು ಅರ್ಜಿ ನೀಡಿರುವ ದಿನಾಂಕವನ್ನು ನಮೂದಿಸುವುದು ಹಾಗೂ ಹಿಂದಿನ ಎರಡು ತಿಂಗಳುಗಳ ಕಟಾವಣೆಯನ್ನು ನಮೂದಿಸುವುದು.( ಪೂರ್ಣ ಕಾಲಂಗಳನ್ನು ಭರ್ತಿ ಮಾಡತಕ್ಕದ್ದು)
7. ಮುಂಗಡ ಮತ್ತು ಭಾಗಶಃ ಮಂಜೂರಾತಿಗೆ ಸಂಬಂಧಿಸಿದಂತೆ ಬಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕರು ಇವರುಗಳ ವೃಂದ ನಮೂದಿಸುವುದು.
8. ಮುಂಗಡ ಮತ್ತು ಭಾಗಶಃ ಮಂಜೂರಾತಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯಲ್ಲಿನ ಎಲ್ಲಾ ಪ್ರತಿಗಳನ್ನು ತ್ರಿಪ್ರತಿಗಳಲ್ಲಿ ಸಲ್ಲಿಸುವುದು.
9. ಮುಂಗಡ ಮತ್ತು ಭಾಗಶಃ ಮಂಜೂರಾತಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಮೂಲಕ ಕಳುಹಿಸಿ ಕೊಡಲು ತಿಳಿಸಿದೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ನೇರವಾಗಿ ಈ ಕಛೇರಿಗೆ ಸಲ್ಲಿಸುವ ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗುವುದು.

10. ಬಟವಾಡೆ ಅಧಿಕಾರಿಗಳು ಸಂಬಂಧಿಸಿದ ಶಿಕ್ಷಕರ ವೇತನ ಪಾವತಿಯಾಗುವ ಬ್ಯಾಂಕಿನ ಉಳಿತಾಯ ಖಾತೆಗೆ ಜಮಾ ಆಗುವಂತೆ ನಿರ್ವಹಿಸತಕ್ಕದ್ದು. ತಪ್ಪಿದ್ದಲ್ಲಿ ನೇರವಾಗಿ ನಿಮ್ಮನ್ನೆ ಹೊಣೆಗಾರರನ್ನಾಗಿ ಮಾಡಲಾಗುವುದು.

11. ಮುಂಗಡ ಮತ್ತು ಭಾಗಶಃ ಮಂಜೂರಾತಿಗೆ ಸಂಬಂಧಿಸಿದಂತೆ ಈ ಕಛೇರಿಗೆ ಸೂಕ್ತ ಶಿಫಾರಸ್ಸಿನೊಂದಿಗೆ ಕಳುಹಿಸುವ ಪ್ರಸ್ತಾವನೆಯ ಒಂದು ಪ್ರತಿಯನ್ನು ಸದರಿ ಶಿಕ್ಷಕರಿಗೆ ಕಳುಹಿಸುವುದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪಾಲಿಸಲು ತಿಳಿಸುತ್ತಾ ಸೂಕ್ತ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಿದೆ.

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಇವರಿಗೆ,

ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ

1) ಅಪರ ಆಯುಕ್ತರು ಧಾರವಾಡ ಹಾಗೂ ಗುಲ್ಬರ್ಗಾ
2) ರಾಜ್ಯದ ಎಲ್ಲಾ ಸಹನಿರ್ದೇಶಕರುಗಳಿಗೆ
3) ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ